ಹೆಣ್ಣಿಗೆ ಅಕ್ಷರದ ಮಹತ್ವ ಸಾವಿತ್ರಿಬಾಯಿ ಫುಲೆಯಿಂದ: ವೈ.ಎಸ್. ಸಿದ್ದೇಗೌಡ ಪು-2

# ಕಲ್ಪತರು ಟೈಮ್ಸ್

ತುಮಕೂರು ವಿಶ್ವವಿದ್ಯಾನಿಲಯ ಬಿಎಫ್‌ಎ ವಿದ್ಯಾರ್ಥಿಗಳ ಕೈಯಲ್ಲಿ ಅರಳಿದ ಜ್ಞಾನವೃಕ್ಷ ಪು-3

ಸಂಪುಟ: 2 । ಸಂಚಿಕೆ: 12 । ಪುಟ-4 । 30 ಜನವರಿ 2020 ।ತುಮಕೂರು ವಿವಿ ಸ್ನಾತಕೋತ್ತರ ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಸಂಚಿಕೆ । ಖಾಸಗಿ ಪ್ರಸಾರಕ್ಕಾಗಿ ಮಾತ್ರ

# ಪದ್ಮಶ್ರೀಯ ಗೌರವ ಹೆಚ್ಚಿಸಿದ ಅಕ್ಷರಸಂತ, ವೃಕ್ಷಮಾತೆ

## ■ ಹರೇಕಳ ಹಾಜಬ್ಬ ಮತ್ತು ತುಳಸಿ ಗೌಡರ ನಿಸ್ವಾರ್ಥ ಸೇವೆಗೆ ಒಲಿದ ಭಾರತದ ಶ್ರೇಷ್ಠ ಪುರಸ್ಕಾರ

'ಯಾರು ಬೇರೆಯವರಿಗಾಗಿ ಬದುಕುತ್ತಾರೋ ಅವರು ನಿಜವಾದ ಜೀವನ ನಡೆಸುತ್ತಾರೆ; ಉಳಿದವರು ಬದುಕಿದ್ದೂ ಸತ್ತಂತೆ' ಎಂಬ ಸ್ವಾಮಿ ವಿವೇಕಾನಂದರ ಮಾತಿನ ಮರ್ಮ ಅರ್ಥವಾಗುವುದು ಹಾಜಬ್ಬ ಅಥವಾ ತುಳಸಿಗೌಡರಂತಹ ವಿಶಿಷ್ಟ ವ್ಯಕ್ತಿತ್ವಗಳನ್ನು ಕಂಡಾಗ. ಸ್ವತಃ ಅನಕ್ಷರಸ್ಥರಾದರೂ ಕಿತ್ತಳೆ ಮಾರಿ ಬಂದ ಆದಾಯದಲ್ಲೇ ಇಡಿಯ ಊರನ್ನೇ ಬೆಳಗುವಂತಹ ಶಾಲೆ ಕಟ್ಟಿಸಿದ ಹರೇಕಳ ಹಾಜಬ್ಬ, ಬಡತನದ ಮರುಭೂಮಿಯಲ್ಲೇ ಹುಟ್ಟಿದರೂ ನಾಡೇ ಹಸಿರಾಗುವಂತೆ ಸಾವಿರಾರು ಮರಗಳನ್ನು ಬೆಳೆಸಿದ ತುಳಸಿ ಗೌಡ! ಇಂತಹ ಮಹಾನ್ ವ್ಯಕ್ತಿತ್ವಗಳಿಗೆ ಪದ್ಮಶ್ರೀ ಪ್ರಶಸ್ತಿ ಸಂದಾಗ ವ್ಯಕ್ತಿಗಳ ಗೌರವ ಹೆಚ್ಚಿತು ಎನ್ನುವುದಕ್ಕಿಂತಲೂ ಪ್ರಶಸ್ತಿಗಳ ಮೌಲ್ಯ ಹೆಚ್ಚಾಯಿತು ಎನ್ನುವುದೇ ಹೆಚ್ಚು ಸರಿ!

ಪದವಿ-ಪುರಸ್ಕಾರಗಳ ಆಧಾರದಲ್ಲಿ ವ್ಯಕ್ತಿಗಳ ಮೌಲ್ಯವನ್ನು ಅಳೆಯುವವರೇ ಹೆಚ್ಚು ಈ ಕಾಲದಲ್ಲಿ. ಯಾರು ಎಷ್ಟು ಡಿಗ್ರಿಗಳನ್ನು ಪಡೆದುಕೊಂಡರು, ಎಷ್ಟು ಸನ್ಮಾನಗಳನ್ನು ಮಾಡಿಸಿಕೊಂಡರು, ಮಾಧ್ಯಮಗಳಲ್ಲಿ ಎಷ್ಟು ಪ್ರಚಾರ ಪಡೆದುಕೊಂಡರು, ಎಷ್ಟು ಸಂಪತ್ತು ಸಂಪಾದಿಸಿದರು ಎಂಬುದರ ಆಧಾರದಲ್ಲೇ ವ್ಯಕ್ತಿಗಳು ಎಷ್ಟು 'ಗಣ್ಯರು' ಎಂಬುದನ್ನು ನಿರ್ಧರಿಸುವ ಸಮಾಜದ ನಡುವೆ ನಾವು ಬದುಕುತ್ತಿದ್ದೇವೆ.

ನಾನು, ನನ್ನದು, ನನ್ನ ಕುಟುಂಬ, ನನ್ನ ಆದಾಯ-ಇಷ್ಟರ ಬಗೆಗೇ ತಲೆಕೆಡಿಸಿಕೊಂಡವರು ಹೆಚ್ಚಿರುವಾಗ ನಿಜವಾದ ಶಿಕ್ಷಣದ ಮೌಲ್ಯ ಅರ್ಥವಾಗುವುದೇ ಇಲ್ಲ. ಶಿಕ್ಷಣ ಎಂದರೆ ಕೇವಲ ಅಕ್ಷರಜ್ಞಾನ ಅಲ್ಲ, ನಮ್ಮ ಜತೆಗೆ ಇರುವವರೊಂದಿಗೆ ಹೇಗೆ ಬದುಕಿಬಾಳಬೇಕು ಎಂಬುದನ್ನು ಅರ್ಥ ಮಾಡಿಕೊಂಡಿರುವ ಮನಸ್ಥಿತಿ. ಮನುಷ್ಯತ್ವ, ಸಹಕಾರ, ಪರಸ್ಪರ ನಂಬಿಕೆ, ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳದವನು ಎಂತಹ ಪದವಿಗಳನ್ನು ಪಡೆದರೂ ದೊಡ್ಡ ಮನುಷ್ಯನಾಗಲಾರ.



ಪದ್ಮಶ್ರೀ ಹರೇಕಳ ಹಾಜಬ್ಬ



ಪದ್ಮಶ್ರೀ ತುಳಸಿಗೌಡ

**ಹರೇಕಳ ಹಾಜಬ್ಬ:** ಮಂಗಳೂರು ತಾಲೂಕಿನ ಹರೇಕಳ ನ್ಯೂಪಡ್ಪು ಗ್ರಾಮದಲ್ಲಿ ಹಾಜಬ್ಬ ಅವರು ಬೀಡಿ ಕಟ್ಟುವ ಕೆಲಸ ಮಾಡುತ್ತಿದ್ದರು. ಕುಟುಂಬ ನಿರ್ವಹಣೆಗೆ ಆ ಹಣ ಸಾಕಾಗದೇ, ಕಿತ್ತಳೆ ವ್ಯಾಪಾರವನ್ನು ಆರಂಭಿಸಿದರು. ಕಿತ್ತಳೆ ವ್ಯಾಪಾರ ಎಂದರೆ ಅಂಗಡಿ ವ್ಯವಹಾರವಲ್ಲ. ಬಿರುಬಿಸಿಲಿಲ್ಲಿ ಹಣ್ಣಿನಬುಟ್ಟಿ ತಲೆಯಲ್ಲಿಟ್ಟು ಬೀದಿ ಅಲೆಯುವ ಕಾಯಕ.

ತಾನು ಅನಕ್ಷರಸ್ಥನಾದರೂ ತನ್ನ ಹಳ್ಳಿಯ ಯಾವ ಮಕ್ಕಳಿಗೂ ಆ ಪರಿಸ್ಥಿತಿ ಬರಬಾರದು ಎಂದು ನಿರ್ಧರಿಸಿ, ಶಾಲೆ ಆರಂಭಿಸುವ ಕನಸು ಹೊತ್ತರು. ಪ್ರತಿದಿನ ಕಿತ್ತಳೆ ಮಾರಿ ಬರುವ ಹಣವನ್ನು ಶಾಲೆಗಾಗಿ ಮೀಸಲಿಡುತ್ತಿದ್ದರು. ಕಚೇರಿಗಳಿಗೆ ಓಡಾಡಿ ಶಾಲಾ ನಿರ್ಮಾಣಕ್ಕೆ ಅನುಮತಿ ನೀಡುವಂತೆ ಕೋರಿದರು. ಸತತ ಪ್ರಯತ್ನದಿಂದಾಗಿ ಅಧಿಕಾರಿಗಳ ಮನ ಗೆದ್ದೇ ಬಿಟ್ಟರು. ಶಾಲೆ ಕಟ್ಟಿಸಲು ಕಿತ್ತಳೆ ವ್ಯಾಪಾರದಿಂದ ಬಂದ ಹಣ ಸಾಕಾಗದೇ, ಬೇರೆಯವರಲ್ಲಿ ದಾನ ಕೇಳಿದರು. ಮೊದಲು ಪ್ರಾಥಮಿಕ ಶಾಲೆ, ಆಮೇಲೆ ಪ್ರೌಢಶಾಲೆ ತೆರೆದರು. ವಿದ್ಯೆಯಿಂದ ವಂಚಿತವಾದ ಗ್ರಾಮದಲ್ಲಿ ಜ್ಞಾನದ ದೀಪವನ್ನು ಬೆಳಗಿಸಿದರು. ಈ ಶಾಲೆಯು ಸತತ 20 ವರ್ಷಗಳಿಂದ ಯಾವ ಕೊರತೆಯಿಲ್ಲದೇ ಮುನ್ನಡೆಯುತ್ತಿದ್ದು, ಸಾವಿರಾರು ಮಕ್ಕಳಿಗೆ ಶಿಕ್ಷಣವನ್ನು ನೀಡಿದೆ.

**ತುಳಸಿಗೌಡ:** ಪರಿಸರಪ್ರೇಮ ಇವರಿಗೆ ಹುಟ್ಟಿನಿಂದಲೇ ಬಂದಿದೆ. ಊರಿನವರ ಜೊತೆ ಕಾಡಿನಿಂದ ಕಟ್ಟಿಗೆ ತರುತ್ತಾ ತುಳಸಿ ಗೌಡ ಬೀಜಗಳನ್ನು ಶೇಖರಣೆ ಮಾಡಿ ಅರಣ್ಯ ಇಲಾಖೆಗೆ ನೀಡುತ್ತಿದ್ದರು. ಕಡಿಮೆ ಕೂಲಿಗೆ ಸಸಿ ನೆಡುವ ಕೆಲಸ ಬೇಡ ಎಂದು ಎಲ್ಲರೂ ಹೇಳಿದರೂ ಗಿಡ ನೆಡುವ ಕೆಲಸವನ್ನು ತುಳಸಿ ನಿಲ್ಲಿಸಲೇ ಇಲ್ಲ. ತಾನು ಬೆಳೆಸಿದ ಸಸಿಗಳನ್ನು ಹೊನ್ನಳ್ಳಿ ಭಾಗದ ಅರಣ್ಯ ಪ್ರದೇಶದಲ್ಲಿ ಸರ್ಕಾರಿ ಕಛೇರಿ, ಶಾಲೆ, ಮನೆಗಳ ಆವರಣ, ರಸ್ತೆಗಳ ಪಕ್ಕದಲ್ಲಿ ನೆಡಲು ಪ್ರಾರಂಭಿಸಿದರು. ವರ್ಷಕ್ಕೆ ಇವರು ಸುಮಾರು ಮೂವತ್ತು ಸಾವಿರ ಸಸಿಗಳನ್ನು ನೆಟ್ಟು ಪೋಷಿಸುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಿದ್ದರು. ಇವರು ನೆಟ್ಟು ಪೋಸಿಸಿದ ಸಸಿಗಳು ಇಂದು ಬೆಳೆದು ಹೆಮ್ಮರಗಳಾಗಿ ಸಾವಿರಾರು ಜನರಿಗೆ ಗಾಳಿ, ನೆರಳನ್ನು ಕೊಡುತ್ತಿವೆ.

ಅರಣ್ಯದಲ್ಲಿ ತಾನು ನೆಟ್ಟ ಮರವನ್ನು ಮರಗಳ್ಳರು ಕಡಿದಾಗ ತುಳಸಿ ಕಡಿದ ಮರವನ್ನ ಅಪ್ಪಿ ಅತ್ತ ಘಟನೆಗಳು ಸಾಕಷ್ಟಿವೆ. ಇವರು ಅರಣ್ಯದ ವಿಶ್ವಕೋಶ ಎಂದೇ ಪ್ರಸಿದ್ಧಿ ಪಡೆದಿದ್ದಾರೆ. ಸಸ್ಯಗಳ ಬಗ್ಗೆ ಅವರಿಗಿರುವ ಜ್ಞಾನ ಯಾವುದೇ ಸಸ್ಯ ವಿಜ್ಞಾನಿಗಿಂತ ಕಡಿಮೆಯಲ್ಲ. ತುಳಸಿ ಅವರು ಕೇವಲ ಎರಡು ವರ್ಷದವರಿದ್ದಾಗ ಅವರ ತಂದೆಯ ಸಾವು ತೀವ್ರವಾಗಿ ಬಾಧಿಸಿತ್ತು. ಬಳಿಕ ಅವರಿಗೆ ಯಾವುದೇ ಔಪಚಾರಿಕ ಶಿಕ್ಷಣ ಸಿಗಲಿಲ್ಲ. ಚಿಕ್ಕ ವಯಸ್ಸಿನಲ್ಲೇ ವಿವಾಹವಾದರು, ವಿಧವೆಯೂ ಆದರು. ಎಲ್ಲ ಸಂಕಷ್ಟಗಳಿಂದ ನೊಂದರೂ ತುಳಸಿ ಪರಿಸರಪೂಜೆಯನ್ನು ಮಾತ್ರ ಮರೆಯಲಿಲ್ಲ. ಹಾಲಕ್ಕಿ ಜನಾಂಗಕ್ಕೆ ಸೇರಿದ ತುಳಸಿ ಶಾಲೆ ಮುಖವನ್ನು ಕಂಡವರಲ್ಲ. ಪರಿಸರ ಸಂರಕ್ಷಣೆ ಬಗ್ಗೆ ಭಾಷಣಗಳನ್ನು ನೀಡಲಿಲ್ಲ, ಪ್ರಬಂಧಗಳನ್ನು ಬರೆಯಲಿಲ್ಲ. ಅವನ್ನೆಲ್ಲ ತಮ್ಮ ಜೀವನದಲ್ಲೇ ಅಳವಡಿಸಿಕೊಂಡರು.

ನಮ್ಮ ಬದುಕಿಗೆ ಬೇಕಾದ ಆದರ್ಶಗಳು, ಮಾದರಿಗಳನ್ನು ಹುಡುಕಿಕೊಂಡು ಎಲ್ಲೆಲ್ಲೋ ಅಲೆಯಬೇಕಾಗಿಲ್ಲ. ಅವರು ನಮ್ಮೊಂದಿಗೇ ಇದ್ದಾರೆ. ನೋಡುವ ಕಣ್ಣು, ಕೇಳುವ ಕಿವಿ, ಅರ್ಥಮಾಡಿಕೊಳ್ಳುವ ಹೃದಯ ಬೇಕಷ್ಟೇ.

› ಉಮೇಶ ರೈತನಗರ / ನಿಸರ್ಗ ಸಿ.ಎ.

# 'ನೈಸರ್ಗಿಕ ಉತ್ಪನ್ನಗಳಿಂದ ಕ್ಯಾನ್ಸರ್‌ಗೆ ಔಷಧಿ'

## ■ ಅಮೇರಿಕದ ವಿಜ್ಞಾನಿಗಳೊಂದಿಗೆ ತುಮಕೂರು ವಿವಿಯಲ್ಲಿ ಸಂವಾದ

**ತುಮಕೂರು:** ನೈಸರ್ಗಿಕ ಉತ್ಪನ್ನಗಳಿಂದ ಕ್ಯಾನ್ಸರ್ ಗುಣಪಡಿಸುವ ಸಂಶೋಧನೆಗಳು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಮಹತ್ವ ಪಡೆಯುತ್ತಿವೆ ಎಂದು ಅಮೇರಿಕದ ಟೆಕ್ಸಾಸ್ ವಿಶ್ವವಿದ್ಯಾನಿಲಯದ ವಿಜ್ಞಾನಿ ಪ್ರೊ. ಸೂಸನ್ ಎಲ್. ಮೂಬೆರಿ ತಿಳಿಸಿದರು.

ತುಮಕೂರು ವಿಶ್ವವಿದ್ಯಾನಿಲಯವು ಆಂತರಿಕ ಗುಣಮಟ್ಟ ಭರವಸೆ ಕೋಶದ ಆಶ್ರಯದಲ್ಲಿ ಜ. 2ರಂದು ಏರ್ಪಡಿಸಿದ್ದ 'ವಿಜ್ಞಾನಿಗಳೊಂದಿಗೆ ಸಂವಾದ' ಕಾರ್ಯಕ್ರಮದಲ್ಲಿ ಮಾತನಾಡಿದರು.

ಕೃತಕ ಔಷಧಿಗಳಿಗಿಂತಲೂ ನಿಸರ್ಗದತ್ತ ಉತ್ಪನ್ನಗಳನ್ನು ಬಳಸಿಕೊಂಡು ಕ್ಯಾನ್ಸರನ್ನು ಗುಣಪಡಿಸುವ ಔಷಧಿಗಳನ್ನು ಕಂಡುಹಿಡಿಯಲಾಗುತ್ತಿದೆ. ಇವು ಈಗಾಗಲೇ ಬಳಕೆಯಲ್ಲಿರುವ ಔಷಧಿಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿವೆ. ಸ್ತನ ಕ್ಯಾನ್ಸರ್ ಹಾಗೂ ಮಕ್ಕಳಲ್ಲಿ ಬೆಳೆಯುವ ಟ್ಯೂಮರ್‌ಗಳ ಕುರಿತಾದ ಸಂಶೋಧನೆಗಳು ಸದ್ಯದಲ್ಲೇ ಹೊಸ ಮೈಲುಗಲ್ಲನ್ನು ಸ್ಥಾಪಿಸಲಿವೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಕ್ಯಾನ್ಸರ್ ಒಂದು ಸಂಕೀರ್ಣ ಕಾಯಿಲೆ. ಬಿ17 ಜೀವಸತ್ವದ ಕೊರತೆಯಿಂದಲೇ ಅದು ಬರುತ್ತದೆ ಇತ್ಯಾದಿ ನಿರ್ದಿಷ್ಟ ಕಾರಣಗಳನ್ನು ಕೊಡಲು ಸಾಧ್ಯವಿಲ್ಲ. ಕ್ಯಾನ್ಸರ್ ಸಂಶೋಧನೆಯಲ್ಲಿ ಸಾಗಬೇಕಾದ ದಾರಿ ಇನ್ನೂ ದೀರ್ಘವಾಗಿದೆ ಎಂದರು.

ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ, ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಜ್ಞಾನ ಮತ್ತು ಕೌಶಲಗಳ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವ ಅವಶ್ಯಕತೆಯಿದೆ. ಇದಕ್ಕಾಗಿ ವಿವಿಧ ರಂಗಗಳ ಸಂಶೋಧನೆಗಳಲ್ಲಿ ಸಮಗ್ರತೆ ಸಾಧಿಸಬೇಕಾಗಿದೆ ಎಂದರು.



**ಅಮೇರಿಕದ ವಿಜ್ಞಾನಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ತುಮಕೂರು ವಿವಿ ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ಉದ್ಘಾಟಿಸಿದರು. ಪ್ರೊ. ಕೆ. ಎನ್. ಗಂಗಾನಾಯಕ್, ಪ್ರೊ. ಕೆ. ಜಿ. ಪರಶುರಾಮ, ಡಾ. ಎಸ್. ಶ್ರೀನಿವಾಸ ಮತ್ತಿತರರು ಇದ್ದಾರೆ.**

ಯಾವುದೇ ರಾಷ್ಟ್ರದ ಅಭಿವೃದ್ಧಿಯನ್ನು ಆ ರಾಷ್ಟ್ರ ಸಂಶೋಧನೆಯ ಕಡೆಗೆ ಎಷ್ಟು ಮಹತ್ವ ನೀಡಿದೆ ಎಂಬುದರ ಆಧಾರದಲ್ಲಿ ನಿರ್ಧರಿಸಬಹುದು. ತುಮಕೂರು ವಿಶ್ವವಿದ್ಯಾನಿಲಯವು ಅಂತರರಾಷ್ಟ್ರೀಯ ಜ್ಞಾನವನ್ನು ಹಾಗೂ ಸಂಶೋಧನೆಯ ಫಲಿತಾಂಶಗಳನ್ನು ಅಧ್ಯಾಪಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ನೀಡುವ ವೇದಿಕೆ ಕಲ್ಪಿಸಿದೆ ಎಂದರು.

ಮೂಲತಃ ತುಮಕೂರು ಜಿಲ್ಲೆಯವರಾಗಿದ್ದು ಪ್ರಸ್ತುತ ಅಮೇರಿಕದ ಅಲಬಾಮ ವಿಶ್ವವಿದ್ಯಾನಿಲಯದ ಕಂಪ್ಯೂಟರ್ ಸೈನ್ಸ್ ಪ್ರಾಧ್ಯಾಪಕರಾಗಿರುವ ಪ್ರೊ. ರಂಗನಾಥ್ ಮಾತನಾಡಿ, ನಮ್ಮನ್ನು ನಾವು ಯಾರೊಂದಿಗೂ ಹೋಲಿಸಿಕೊಳ್ಳಬೇಕಾಗಿಲ್ಲ. ನಮ್ಮ ವರ್ತಮಾನ ಹಾಗೂ ಭವಿಷ್ಯಗಳು ನಮ್ಮ ನಿಯಂತ್ರಣದಲ್ಲಿದ್ದರೆ ಯಶಸ್ಸು ತಾನಾಗಿಯೇ ಒದಗುತ್ತದೆ ಎಂದರು.

ಕೊಲರಾಡೊದ ಡಿಗ್ರೇಡರ್ ಟೆಕ್ನಾಲಜಿ ಅಟ್ ಫ್ರಾಂಟಿಯರ್ ಮೆಡಿಸಿನ್ಸ್ ಮುಖ್ಯಸ್ಥ ಪ್ರೊ. ಜೇಮ್ಸ್ ವಿಂಕ್ಲರ್, ರಟ್ಗರ್ಸ್ ಕ್ಯಾನ್ಸರ್ ಇನ್ಸ್‌ಟಿಟ್ಯೂಟಿನ ಮುಖ್ಯ ವೈಜ್ಞಾನಿಕ ಅಧಿಕಾರಿ ಪ್ರೊ. ಇಲೀನ್ ವೈಟ್, ಟೆಕ್ಸಾಸ್ ವಿಶ್ವವಿದ್ಯಾನಿಲಯದ ಪ್ರೊ. ಗ್ರೆಗರಿ ಮ್ಯಾಥ್ಯೂ ಪ್ಯಾಟರ್ಸನ್, ಯೂನಿವರ್ಸಿಟಿ ಆಫ್ ಮೆಂಫಿಸ್‌ನ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಾಧ್ಯಾಪಕ ಪ್ರೊ. ಸಜ್ಜನ್ ಜಿ. ಶಿವ, ಯೂನಿವರ್ಸಿಟಿ ಆಫ್ ಮಿಸಿಸಿಪ್ಪಿಯ ಪ್ರಾಧ್ಯಾಪಕ ಪ್ರೊ. ಕೆ. ಎನ್. ತಿಮ್ಮಯ್ಯ ಸಂವಾದದಲ್ಲಿ ಪಾಲ್ಗೊಂಡರು.

ಕುಲಸಚಿವ ಪ್ರೊ. ಕೆ. ಎನ್. ಗಂಗಾನಾಯಕ್, ಆಂತರಿಕ ಗುಣಮಟ್ಟ ಭರವಸೆ ಕೋಶದ ನಿರ್ದೇಶಕ ಪ್ರೊ. ಕೆ. ಜಿ. ಪರಶುರಾಮ, ಸಂವಾದ ಕಾರ್ಯಕ್ರಮದ ಸಂಚಾಲಕ ಡಾ. ಎಸ್. ಶ್ರೀನಿವಾಸ್ ಉಪಸ್ಥಿತರಿದ್ದರು. ತುಮಕೂರು ವಿವಿ, ಸಿದ್ಧಾರ್ಥ ವೈದ್ಯಕೀಯ ಮಹಾವಿದ್ಯಾಲಯ, ಸಿದ್ಧಗಂಗಾ ತಾಂತ್ರಿಕ ವಿದ್ಯಾಲಯ, ಸಿದ್ಧಗಂಗಾ ಫಾರ್ಮಸಿ ಕಾಲೇಜು, ಶ್ರೀದೇವಿ ವೈದ್ಯಕೀಯ ಕಾಲೇಜು ಹಾಗೂ ಗುಬ್ಬಿಯ ಸಿಐಟಿ ಅಧ್ಯಾಪಕರು ಹಾಗೂ ಸಂಶೋಧಕರು ಸಂವಾದದಲ್ಲಿ ಭಾಗವಹಿಸಿದರು.

# ಇಂಡಿಯನ್ ಸೈನ್ಸ್ ಕಾಂಗ್ರೆಸ್: ತುಮಕೂರು ವಿವಿಗೆ ಪ್ರಶಂಸೆ

**ತುಮಕೂರು:** ಜನವರಿ 3ರಿಂದ 7ರವರೆಗೆ ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ನಡೆದ ಇಂಡಿಯನ್ ಸೈನ್ಸ್ ಕಾಂಗ್ರೆಸ್‌ನ ವಿಜ್ಞಾನ ವಸ್ತುಪ್ರದರ್ಶನದಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ಭಾಗವಹಿಸಿ ಪ್ರಶಂಸಾ ಪತ್ರವನ್ನು ಪಡೆದಿದೆ.

ಸಮ್ಮೇಳನದ ಅಂಗವಾಗಿ ನಡೆದ ವಿಜ್ಞಾನ ಪ್ರದರ್ಶನದಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಮಳಿಗೆಯು ವಿಶೇಷ ಗಮನ ಸೆಳೆಯಿತು. ಪ್ರಧಾನಿ ನರೇಂದ್ರ ಮೋದಿಯವರಿಂದ ಉದ್ಘಾಟನೆಗೊಂಡ ಈ ಐದು ದಿನಗಳ ಸಮ್ಮೇಳನದಲ್ಲಿ ಪ್ರಪಂಚದ ವಿವಿಧ ಭಾಗಗಳು 40,000ಕ್ಕೂ ಹೆಚ್ಚು ಮಂದಿ ವಿಜ್ಞಾನಿಗಳು, ಸಂಶೋಧಕರು ಹಾಗೂ ಪ್ರಾಧ್ಯಾಪಕರು ಭಾಗವಹಿಸಿದ್ದರು.

ಸಂಶೋಧನ ಕ್ಷೇತ್ರದಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಕೊಡುಗೆಯನ್ನು ಬಿಂಬಿಸುವ ಮಳಿಗೆಗೆ ನೂರಾರು ವಿದೇಶಿ ವಿಜ್ಞಾನಿಗಳು ಹಾಗೂ ಸಂಶೋಧಕರು ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಮಹಿಳೆಯರು, ಮಕ್ಕಳು, ರೈತರು ಹಾಗೂ ಸಂವಹನಕಾರರಿಗಾಗಿ ವಿಶೇಷ ಗೋಷ್ಠಿಗಳು ನಡೆದವು.

ಡಿಆರ್‌ಡಿಒ, ಇಸ್ರೋ, ಐಸಿಎಂಆರ್, ಸಿಎಸ್‌ಐಆರ್, ಬಯೋಟೆಕ್ನಾಲಜಿ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕೃಷಿ, ತೋಟಗಾರಿಕೆ ಇಲಾಖೆ, ವಿವಿಧ ವಿಶ್ವವಿದ್ಯಾನಿಲಯಗಳು ಭಾಗವಹಿಸಿದ ಪ್ರದರ್ಶನದಲ್ಲಿ ತುಮಕೂರು ವಿಶ್ವವಿದ್ಯಾನಿಲಯವೂ ಒಂದಾಗಿತ್ತು. ತುಮಕೂರು ವಿವಿ ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ವಿಜ್ಞಾನ ಪ್ರದರ್ಶನದಲ್ಲಿ ಭಾಗವಹಿಸಿ ಮೆಚ್ಚುಗೆ ಪಡೆದ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ತಂಡವನ್ನು ಅಭಿನಂದಿಸಿದ್ದಾರೆ.



**ಇಂಡಿಯನ್ ಸೈನ್ಸ್ ಕಾಂಗ್ರೆಸ್‌ನ ವಿಜ್ಞಾನ ಪ್ರದರ್ಶನದಲ್ಲಿ ಭಾಗವಹಿಸಿದ ಅಧ್ಯಾಪಕರ ತಂಡಕ್ಕೆ ತುಮಕೂರು ವಿವಿ ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ಪ್ರಶಂಸಾಪತ್ರ ನೀಡಿದರು.**

## ವಿಜ್ಞಾನ ಕಾಲೇಜಿನಲ್ಲಿ ಸಲೀಂ ಅಲಿ ಕುರಿತ ವಿಶೇಷ ಕಾರ್ಯಕ್ರಮ

**ತುಮಕೂರು:** ಡಾ.ಸಲೀಂ ಅಲಿ ಅವರು ದೇವರಾಯನ ದುರ್ಗಕ್ಕೆ ಆಗಮಿಸಿದ 80 ವರ್ಷಗಳ ಸ್ಮರಣಾರ್ಥ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗವು ಜ.3ರಂದು ವಿಶೇಷ ಉಪನ್ಯಾಸವನ್ನು ಆಯೋಜಿಸಿತ್ತು.

ಈ ಕಾರ್ಯಕ್ರಮಕ್ಕೆ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಪ್ರಾಂಶುಪಾಲೆ ಶಾಲಿನಿ ಬಿ.ಆರ್. ಚಾಲನೆ ನೀಡಿದರು. 'ಅವನಿ' ಅಕಾಡೆಮಿ ವತಿಯಿಂದ ಡಾ.ಮಹೇಶ್ ವಿಶೇಷ ಉಪನ್ಯಾಸವನ್ನು ನೀಡಿದರು. ಡಾ.ಸಲೀಂ ಅಲಿ ಅವರು ಗುರುತಿಸಿದ 66 ಪ್ರಭೇದದ ಪಕ್ಷಿ ಸಂಕುಲಗಳ ಬಗ್ಗೆ ಮಾಹಿತಿ ನೀಡಿದರು.

ಈ ಕಾರ್ಯಕ್ರಮದಲ್ಲಿ 'ಅವನಿ' ಅಕಾಡೆಮಿ ಸದಸ್ಯರಾದ ಚಂದ್ರಶೇಖರ್ ಉಪಾಧ್ಯಾಯ, ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಪರಿಮಳ ಬಿ, ಡಾ.ಲಲಿತ ಹೆಚ್.ಎಂ, ಭಾಗವಹಿಸಿದ್ದರು.

## ಭರತನಾಟ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ

**ತುಮಕೂರು:** ಭರತನಾಟ್ಯ ಸ್ಪರ್ಧೆಯಲ್ಲಿ ತುಮಕೂರು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿ ನವ್ಯ ಟಿ.ಎಸ್ ಪ್ರಥಮ ಸ್ಥಾನ ಪಡೆದಿದ್ದಾರೆ.

ಸಿದ್ದಾರ್ಥ ಶಿಕ್ಷಣ ಮಹಾವಿದ್ಯಾಲಯದಲ್ಲಿ ನೆಹರು ಯುವ ಕೇಂದ್ರ ವತಿಯಿಂದ ಜ.4ರಂದು ಜಿಲ್ಲಾ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮದ ಭರತನಾಟ್ಯ ಸ್ಪರ್ಧೆಯಲ್ಲಿ ವಿಜೇತರಾಗಿದ್ದಾರೆ. ಇವರಿಗೆ ವಿವಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರು ಹಾಗೂ ಅಧ್ಯಾಪಕರು ಅಭಿನಂದನೆ ಸಲ್ಲಿಸಿದ್ದಾರೆ.

## 'ಹೆಣ್ಣಿಗೆ ಅಕ್ಷರದ ಮಹತ್ವ ಸಾವಿತ್ರಿಬಾಯಿ ಫುಲೆಯಿಂದ'



ವಿಶ್ವವಿದ್ಯಾನಿಲಯ ಕಲಾ ಕಾಲೇಜಿನಲ್ಲಿ ಶುಕ್ರವಾರ ನಡೆದ ಸಾವಿತ್ರಿಬಾಯಿ ಫುಲೆ ನೆನಪು ಕಾರ್ಯಕ್ರಮದಲ್ಲಿ ಕುಲಪತಿ ವೈ.ಎಸ್.ಸಿದ್ದೇಗೌಡ ತಿಳಿಸಿದರು.

**ತುಮಕೂರು:** ಹೆಣ್ಣಿಗೆ ಅಕ್ಷರದ ಮಹತ್ವವನ್ನು ತಿಳಿಸಿದವರು ಸಾವಿತ್ರಿಬಾಯಿ ಫುಲೆ ಎಂದು ಲೇಖಕಿ ಮಲ್ಲಿಕಾ ಬಸವರಾಜು ಅಭಿಪ್ರಾಯಪಟ್ಟರು.

ತುಮಕೂರು ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರ ಹಾಗೂ ವಿವಿ ಕಲಾ ಕಾಲೇಜಿನ ಸಹಯೋಗದಲ್ಲಿ ಜ.3ರಂದು ನಡೆದ ಸಾವಿತ್ರಿಬಾಯಿ ಫುಲೆ ನೆನಪು ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಸಾವಿತ್ರಿಬಾಯಿ ಫುಲೆಯವರು ಭಾರತದ ಮೊದಲ ಶಿಕ್ಷಕಿ. ಮೊದಲಿಗೆ ಶಾಲೆಯನ್ನು ತೆರೆದು ಒಂಭತ್ತು ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ಕೊಟ್ಟರು. ಸಮಾಜದಲ್ಲಿ ನಡೆದ ಅವಮಾನಗಳನ್ನು, ದೌರ್ಜನ್ಯಗಳನ್ನು ಮತ್ತು ಅಡೆತಡೆಗಳನ್ನು ದಾಟಿನಡೆದ ಧೀರ ಮಹಿಳೆಯಾಗಿದ್ದರು ಎಂದರು.

ಅಧ್ಯಕ್ಷತೆ ವಹಿಸಿದ್ದ ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ ವೈ ಎಸ್ ಸಿದ್ದೇಗೌಡ ಮಾತನಾಡಿ ನಾವೆಲ್ಲಾ ಹೆತ್ತ ತಂದೆ ತಾಯಿಗೆ ಬೆಲೆ ತರುವಂತಹವರಾಗಬೇಕು. ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಂಡು ಶಿಕ್ಷಣವನ್ನು ಪಡೆದು ಉನ್ನತ ಮಟ್ಟದ ಕಡೆಗೆ ಸಾಗಬೇಕು ಎಂದರು.

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬಂತೆ ಮಹಿಳಾ ಶಿಕ್ಷಣಕ್ಕೆ ಮೊದಲ ಪ್ರಾಶಸ್ತ್ಯ ಕೊಟ್ಟವರು ಫುಲೆ ದಂಪತಿಗಳು. ಅವರ ಪರಿಶ್ರಮವನ್ನು ಇಂದು ಎಲ್ಲರೂ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂದು ವಿಶ್ವ ವಿದ್ಯಾನಿಲಯ ಕಲಾಕಾಲೇಜಿನ ಪ್ರಾಂಶುಪಾಲರಾದ ಪ್ರೊ ಕೆ ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಮಹಿಳಾ ಅಧ್ಯಯನ ಕೇಂದ್ರದ ಸಂಯೋಜಕರಾದ ಡಾ. ಜ್ಯೋತಿ, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗದ ನಿರ್ದೇಶಕರಾದ ಪ್ರೊ. ಎಂ ಕೊಟ್ರೇಶ್ , ಅರ್ಥಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ಜಾಯ್ ನೆರೆಲ್ಲಾ ಉಪಸ್ಥಿತರಿದ್ದರು.

## ವೆಂಕಟರೆಡ್ಡಿಯವರಿಗೆ ಕುವೆಂಪು ಪ್ರಶಸ್ತಿ

**ತುಮಕೂರು:** ರಾಜ್ಯ ಯುವ ಬರಹಗಾರರ ಒಕ್ಕೂಟ ನೀಡುವ 'ಕುವೆಂಪು ಪ್ರಶಸ್ತಿ'ಯನ್ನು ತುಮಕೂರು ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ವೆಂಕಟರೆಡ್ಡಿ ರಾಮರೆಡ್ಡಿ ಪಡೆದಿದ್ದಾರೆ.

ಕರ್ನಾಟಕ ಬೌದ್ಧ ಸಮಾಜ, ಸೆಂಟರ್ ಫಾರ್ ಇನ್‌ಕ್ಲೂಸಿವ್ ಸೋಶಿಯಲ್ ಡೆವಲಪ್ಮೆಂಟ್ ಹಾಗೂ ರಾಜ್ಯ ಯುವ ಬರಹಗಾರರ ಒಕ್ಕೂಟ ಇತ್ತೀಚೆಗೆ ಹಮ್ಮಿಕೊಂಡಿದ್ದ ಸಾವಿತ್ರಿ ಬಾಯಿ ಫುಲೆಯವರ 186ನೇ ಜನ್ಮದಿನೋತ್ಸವ ಹಾಗೂ ಕುವೆಂಪು ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಅವರು ತಮ್ಮ ಶೈಕ್ಷಣಿಕ ಸಾಧನೆಗಾಗಿ ಈ ಪ್ರಶಸ್ತಿ ಸ್ವೀಕರಿಸಿದರು. ತುಮಕೂರು ವಿಶ್ವವಿದ್ಯಾನಿಲಯದ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ಜಿ. ಬಸವರಾಜ, ಬೆಂಗಳೂರು ವಿವಿ ಸಮಾಜಕಾರ್ಯ ವಿಭಾಗದ ಡಾ. ಸಿ. ರಾಜಶೇಖರ್, ಕವಿ ಡಾ. ಓ. ನಾಗರಾಜು, ಸಿಐಎಸ್‌ಡಿ ಕಾರ್ಯದರ್ಶಿ ಶಶಿಕಾಂತರಾವ್ ಮತ್ತಿತರರು ಉಪಸ್ಥಿತರಿದ್ದರು.

# 'ಉತ್ತಮ ಚಾರಿತ್ರ್ಯದಿಂದ ಚರಿತ್ರೆ ಸೃಷ್ಟಿ ಸಾಧ್ಯ'



ತುಮಕೂರು ವಿವಿ ವಿವೇಕಾನಂದ ಅಧ್ಯಯನ ಪೀಠದ ವತಿಯಿಂದ ನಡೆದ ಯುವ ದಿನಾಚರಣೆಯನ್ನು ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ಉದ್ಘಾಟಿಸಿದರು. ವೀರೇಶಾನಂದ ಸರಸ್ವತೀ ಸ್ವಾಮೀಜಿ, ಆರ್. ಕೆ. ಶ್ರೀನಿವಾಸ್, ಭಾಗ್ಯಲಕ್ಷ್ಮೀ ಹೀರೇಂದ್ರ ಷಾ, ಕೆ. ರಾಮಚಂದ್ರಪ್ಪ, ಟಿ. ಎನ್. ಹರಿಪ್ರಸಾದ್ ಇದ್ದಾರೆ.

**ತುಮಕೂರು:** ಉತ್ತಮ ಚಾರಿತ್ರ್ಯದಿಂದ ಮಾತ್ರ ಉತ್ತಮ ಚರಿತ್ರೆ ಸೃಷ್ಟಿಸಲು ಸಾಧ್ಯ ಎಂದು ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷ ವೀರೇಶಾನಂದ ಸರಸ್ವತೀ ಸ್ವಾಮೀಜಿ ತಿಳಿಸಿದರು.

ತುಮಕೂರು ವಿಶ್ವವಿದ್ಯಾನಿಲಯದ ಸ್ವಾಮಿ ವಿವೇಕಾನಂದ ಅಧ್ಯಯನ ಪೀಠವು ವಿವಿ ಕಲಾ ಕಾಲೇಜಿನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಯುವ ದಿನಾಚರಣೆಯಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಬಲಿಷ್ಠ ದೇಶಕ್ಕೆ ಉತ್ತಮ ಚಾರಿತ್ರ್ಯವುಳ್ಳ ಯುವಕರ ಅನಿವಾರ್ಯತೆ ಇದೆ. ಅಂತಹ ಯುವಕರು ಮಾತ್ರ ಇತಿಹಾಸ ನಿರ್ಮಿಸಬಲ್ಲರು. ಸಂಕಲ್ಪ ಶುದ್ಧಿಯಿಂದ ಸಂಕಲ್ಪ ಸಿದ್ಧಿ ಇರುತ್ತದೆ. ಸಂಸ್ಕೃತಿಯನ್ನು ನಿರ್ಲಕ್ಷಿಸದೆ ನಾಗರಿಕತೆಯನ್ನು ನಿರ್ವಹಿಸಬೇಕು ಎಂದರು.

ಬಡತನ ಎಂದೂ ಹಣೆಬರಹವನ್ನು ಬದಲಾಯಿಸಲಾರದು. ಆತ್ಮವಿಶ್ವಾಸ, ಪ್ರಾಮಾಣಿಕತೆ ಹಾಗೂ ಪರಿಶ್ರಮದಿಂದ ನಮ್ಮ ಭವಿಷ್ಯವನ್ನು ನಾವೇ ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಧನಾತ್ಮಕ ವಿಚಾರಗಳು ಶಾಶ್ವತ ಆದರ್ಶಗಳಾಗಿದ್ದು ಯಶಸ್ಸಿನತ್ತ ಮುನ್ನಡೆಸಬಲ್ಲವು. ನಕಲಿ ಹುರುಪು ತಾತ್ಕಾಲಿಕ. ಅದರಿಂದ ಯಾವ ಸಾಧನೆಯೂ ಆಗುವುದಿಲ್ಲ. ಭೂಜಗತ್ತು ತುಂಬ ಚಿಕ್ಕದು, ಆದರೆ ಭಾವಜಗತ್ತು ದೊಡ್ಡದು. ಅದರಲ್ಲಿ ಎಲ್ಲರನ್ನೂ ಸೇರಿಸಿಕೊಂಡು ಮುನ್ನಡೆಯಬೇಕು ಎಂದರು.

ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ಮಾತನಾಡಿ, ಯುವಕರು ತೇಜಸ್ಸು, ಶಕ್ತಿ, ಉತ್ಸಾಹ, ಕರುಣೆ, ಇಂದ್ರಿಯ ನಿಗ್ರಹ, ಮಾನಸಿಕ ಸ್ಥಿರತೆ, ಆತ್ಮವಿಶ್ವಾಸ ಹಾಗೂ ಇಚ್ಛಾಶಕ್ತಿಗಳನ್ನು ರೂಢಿಸಿಕೊಂಡಾಗ ವಿವೇಕಾನಂದರ ಆಶಯ ಈಡೇರುತ್ತದೆ. ಮುಂದಿನ ದಿನಗಳಲ್ಲಿ ವಿವೇಕಾನಂದ ಅಧ್ಯಯನ ಪೀಠದ ವತಿಯಿಂದ ಯುವಕರ ವ್ಯಕ್ತಿತ್ವ ವಿಕಸನದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶ ವಿಶ್ವವಿದ್ಯಾನಿಲಯಕ್ಕಿದೆ ಎಂದರು.

ಸಿಂಡಿಕೇಟ್ ಸದಸ್ಯ ಆರ್.ಕೆ. ಶ್ರೀನಿವಾಸ್, ವಿವಿ ಕ್ಯಾಂಪಸ್‌ಗಳು ಋಣಾತ್ಮಕ ಚಟುವಟಿಕೆಗಳಿಗೆ ಕೇಂದ್ರವಾಗದೆ ಧನಾತ್ಮಕ ಚಿಂತನೆಗಳನ್ನು ಯುವಸಮೂಹದಲ್ಲಿ ಬಿತ್ತಬೇಕು ಎಂದರು.

ಸಿಂಡಿಕೇಟ್ ಸದಸ್ಯೆ ಡಾ. ಭಾಗ್ಯಲಕ್ಷ್ಮಿ ಹೀರೇಂದ್ರ ಷಾ ಮಾತನಾಡಿ, ವಿವೇಕಾನಂದರಿಂದ ಪ್ರೇರಿತರಾದ ಸೋದರಿ ನಿವೇದಿತಾ ವಿದೇಶಿಯರಾದರೂ ಭಾರತೀಯ ಮಹಿಳೆಯರ ಸಬಲೀಕರಣದಲ್ಲಿ ತೊಡಗಿಸಿಕೊಂಡು ಆದರ್ಶಪ್ರಾಯರಾಗಿದ್ದಾರೆ ಎಂದರು.

ವಿವೇಕಾನಂದ ಅಧ್ಯಯನ ಪೀಠದ ನಿರ್ದೇಶಕರ ಟಿ. ಎನ್. ಹರಿಪ್ರಸಾದ್ ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಿವಿ ಕಲಾ ಕಾಲೇಜಿನ ಪ್ರಾಂಶುಪಾಲ ಕೆ. ರಾಮಚಂದ್ರಪ್ಪ ವಂದಿಸಿದರು. ಪತ್ರಿಕೋದ್ಯಮ ಸಹಾಯಕ ಪ್ರಾಧ್ಯಾಪಕ ಸಿಬಂತಿ ಪದ್ಮನಾಭ ಕೆ. ವಿ. ನಿರೂಪಿಸಿದರು.

## 'ರಾಷ್ಟ್ರೀಯತೆ ಪರಿಕಲ್ಪನೆಯ ಹರಿಕಾರ ಸ್ವಾಮಿ ವಿವೇಕಾನಂದ'

**ತುಮಕೂರು:** ಸ್ವಾಮಿ ವಿವೇಕಾನಂದರು ಜಗತ್ತಿಗೆ ಭಾರತವನ್ನು ವಿಶಿಷ್ಟವಾಗಿ ಪರಿಚಯಿಸಿದ ವೀರಸನ್ಯಾಸಿ ಮಾತ್ರವಲ್ಲ, ರಾಷ್ಟ್ರೀಯತೆಯ ನೈಜ ಪರಿಕಲ್ಪನೆಯನ್ನು ಮೊದಲಿಗೆ ಪರಿಚಯಿಸಿದವರು ಎಂದು ಸಮರ್ಥ ಭಾರತ ಸಂಸ್ಥೆಯ ಟ್ರಸ್ಟಿ ರಾಜೇಶ್ ಪದ್ಮಾರ್ ತಿಳಿಸಿದರು.

ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಇತಿಹಾಸ ವಿಭಾಗವು ಆಯೋಜಿಸಿದ್ದ '21ನೇ ಶತಮಾನದ ಯುವಕರಿಗೆ ಸ್ವಾಮಿ ವಿವೇಕಾನಂದ ಎಂಬ ಮಾದರಿ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸೇವೆ ಮತ್ತು ತ್ಯಾಗದಲ್ಲಿ ಭಾರತದ ಅಂತಃಸತ್ವವಿದೆ ಎಂದು ಜಗತ್ತಿಗೆ ಸಾರಿದವರು ಸ್ವಾಮಿ ವಿವೇಕಾನಂದ. ಮಸುಕಾಗಿದ್ದ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಭಾರತೀಯರಲ್ಲಿ ಬಡಿದೆಬ್ಬಿಸಿದರು. ಗಾಂಧೀಜಿ, ತಿಲಕರಂತಹ ಸ್ವಾತಂತ್ರ್ಯ ಹೋರಾಟಗಾರರಿಗೂ, ಕುವೆಂಪು ಅಂತಹ ಮಹಾಕವಿಗಳಿಗೂ ದೊಡ್ಡ ಪ್ರೇರಣೆಯಾದರು ಎಂದರು.

ವಿವೇಕಾನಂದರು ಒಬ್ಬ ವ್ಯಕ್ತಿಯಲ್ಲ, ಅವರೊಂದು ಸಿದ್ಧಾಂತ ಮತ್ತು ಪರಿಕಲ್ಪನೆ. ಅವರಂತಹ ರೋಲ್ ಮಾಡೆಲ್ ಇಂದಿನ ಯುವಕರಿಗೆ ಬೇರೊಬ್ಬರಿಲ್ಲ. ರಾಷ್ಟ್ರನಿರ್ಮಾಣದಲ್ಲಿ ತಮ್ಮ ಪಾತ್ರ ಏನೆಂದು ಅರ್ಥಮಾಡಿಕೊಳ್ಳಲು ಇಂದಿನ ಯುವಜನಾಂಗ ವಿವೇಕಾನಂದರ ಜೀವನವನ್ನು ಅಧ್ಯಯನ ಮಾಡಬೇಕು ಎಂದರು.

ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಪ್ರಾಂಶುಪಾಲ ಕೆ. ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಇತಿಹಾಸ ವಿಭಾಗದ ಮುಖ್ಯಸ್ಥ ಟಿ. ಎನ್. ಹರಿಪ್ರಸಾದ್, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಸಿಬಂತಿ ಪದ್ಮನಾಭ ಕೆ. ವಿ. ಉಪಸ್ಥಿತರಿದ್ದರು.

ನಿಸರ್ಗ ಸಿ.ಎ.

## ಸ್ವರಚಿತ ಕವನ ವಾಚನ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ

**ತುಮಕೂರು:** ರಾಜ್ಯ ಮಟ್ಟದ ಸ್ವರಚಿತ ಕವನ ವಾಚನ ಸ್ಪರ್ಧೆಯಲ್ಲಿ ತುಮಕೂರು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ವಿದ್ಯಾರ್ಥಿನಿ ಮಮತ ಜಿ. ದ್ವಿತೀಯ ಸ್ಥಾನ ಪಡೆದಿದ್ದಾರೆ.

ಮೈಸೂರಿನಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಜ.18 ಮತ್ತು 19ರಂದು ಆಯೋಜಿಸಿದ್ದ ರಾಷ್ಟ್ರ ಪುನರ್ ನಿರ್ಮಾಣಕ್ಕಾಗಿ ವಿದ್ಯಾರ್ಥಿ, ಸಂಸ್ಕೃತಿ, ಚಳುವಳಿ–2 ಎಂಬ ಕಾರ್ಯಕ್ರಮದ ಸ್ವರಚಿತ ಕವನ ವಾಚನ ಸ್ಪರ್ಧೆಯಲ್ಲಿ ವಿಜೇತರಾಗಿದ್ದಾರೆ.

ಇವರಿಗೆ ಕಾಲೇಜಿನ ಪ್ರಾಂಶುಪಾಲೆ ಡಾ.ಶಾಲಿನಿ ಬಿ.ಆರ್. ಮತ್ತು ಸಾಂಸ್ಕೃತಿಕ ಸಮಿತಿ ಮಂಡಳಿಯ ಸಂಯೋಜಕರು ಹಾಗೂ ಅಧ್ಯಾಪಕರು ಅಭಿನಂದನೆ ಸಲ್ಲಿಸಿದ್ದಾರೆ.



# 'ಭ್ರಷ್ಟಾಚಾರ ತೊಲಗದೆ ಗಣತಂತ್ರ ಯಶಸ್ವಿಯಾಗದು'



ತುಮಕೂರು ವಿವಿ ಹಮ್ಮಿಕೊಂಡಿದ್ದ ಗಣರಾಜ್ಯೋತ್ಸವದಲ್ಲಿ ನಿವೃತ್ತ ಪ್ರಾಂಶುಪಾಲ ಪ್ರೊ. ಬಿ. ಎಸ್. ಲಿಂಗರಾಜು ಮಾತನಾಡಿದರು. ಪ್ರೊ. ಎಲ್. ಪಿ. ರಾಜು, ಪ್ರೊ. ಕೆ. ಎನ್. ಗಂಗಾನಾಯಕ್ ಇದ್ದಾರೆ.

**ತುಮಕೂರು:** ಭ್ರಷ್ಟಾಚಾರದ ಕಳಂಕ ತೊಲಗದೆ ಗಣತಂತ್ರದ ಅನುಷ್ಠಾನ ಪರಿಣಾಮಕಾರಿಯಾಗುವುದಿಲ್ಲ ಎಂದು ನಿವೃತ್ತ ಪ್ರಾಂಶುಪಾಲ ಪ್ರೊ. ಬಿ. ಎಸ್. ಲಿಂಗರಾಜು ತಿಳಿಸಿದರು.

ತುಮಕೂರು ವಿಶ್ವವಿದ್ಯಾನಿಲಯ ಭಾನುವಾರ ಹಮ್ಮಿಕೊಂಡಿದ್ದ 71ನೇ ಗಣರಾಜ್ಯೋತ್ಸವದಲ್ಲಿ ಮಾತನಾಡಿದ ಅವರು ಭ್ರಷ್ಟಾಚಾರದಂತಹ ಸಂವಿಧಾನಬಾಹಿರ ಅಂಶಗಳಿಂದಾಗಿ ದೇಶದ ಪ್ರಗತಿ ಕುಂಟುತ್ತಿದೆ ಎಂದರು.

ಆಫ್ರಿಕಾದ ಕೆಲವು ದೇಶಗಳು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತಕ್ಕಿಂತ ಮುಂದಿವೆ. ಎಲ್ಲರನ್ನೂ ಒಳಗೊಳ್ಳುವ ಪ್ರಗತಿ ಭಾರತಕ್ಕೆ ಬೇಕಾಗಿದೆ ಎಂದರು.

ಸಂವಿಧಾನ ಹೇಳುವ ಸಮಾನತೆ, ಭ್ರಾತೃತ್ವ, ಸಹಿಷ್ಣುತೆಗಳನ್ನು ನಿಜದರ್ಥದಲ್ಲಿ ಜಾರಿಗೆ ತರಬೇಕಾಗಿದೆ. ಸಮಾಜದ ನಡುವೆ ಇರುವ ಪರಸ್ಪರ ಅಸಹನೆಯನ್ನು ಹೋಗಲಾಡಿಸಿ ಕುವೆಂಪು ಹೇಳುವ ಸರ್ವಜನಾಂಗದ ಶಾಂತಿಯ ತೋಟವನ್ನು ಅಭಿವೃದ್ಧಿಪಡಿಸಬೇಕೆಂದರು.

ಲಿಂಗ, ಜಾತಿ, ಧರ್ಮ ಇತ್ಯಾದಿಗಳ ಆಧಾರದಲ್ಲಿ ಇರುವ ಅಸಮಾನತೆಯನ್ನು ತೊಲಗಿಸಿ ಯೋಗ್ಯತೆಗೆ ಮನ್ನಣೆ ಸಿಗುವ ವ್ಯವಸ್ಥೆ ಜಾರಿಗೆ ಬರಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಭಾರ ಕುಲಪತಿ ಪ್ರೊ. ಎಲ್. ಪಿ. ರಾಜು, ಬಾಹ್ಯ ಭಯೋತ್ಪಾದನೆಗಿಂತ ಆಂತರಿಕ ಭಯೋತ್ಪಾದನೆ ಹೆಚ್ಚು ಅಪಾಯಕಾರಿಯಾದದ್ದು. ಅದನ್ನು ತಡೆಗಟ್ಟುವುದು ಶಿಕ್ಷಣದ ಪ್ರಗತಿಯಿಂದ ಮಾತ್ರ ಸಾಧ್ಯ ಎಂದರು.

ರಾಜಕೀಯ ಸಮಾನತೆಗಿಂತ ಆರ್ಥಿಕ ಸಮಾನತೆ ಮುಖ್ಯ. ಇದು ಇನ್ನೂ ನಮ್ಮ ಹಳ್ಳಿಗಳಲ್ಲಿ ಸಾಕಾರಗೊಂಡಿಲ್ಲ. ಜನರು ಪರಸ್ಪರ ಗೌರವಿಸಿಕೊಂಡು ಬಾಳುವ ವಾತಾವರಣ ಕಲ್ಪಿಸಬೇಕಿದೆ ಎಂದರು.

ದೇಶ ಅಭಿವೃದ್ಧಿಯಾಗದಿದ್ದರೆ ಅದು ಸಂವಿಧಾನದ ತಪ್ಪಲ್ಲ, ಅದನ್ನು ಅನುಷ್ಠಾನಗೊಳಿಸುವವರ ತಪ್ಪು ಎಂದು ಡಾ. ಬಿ.ಆರ್. ಅಂಬೇಡ್ಕರ್ ಹೇಳಿದ್ದನ್ನು ಅವಲೋಕನಕ್ಕೆ ಒಳಪಡಿಸುವ ಕಾಲ ಬಂದಿದೆ ಎಂದರು.

ಕುಲಸಚಿವ ಪ್ರೊ. ಕೆ. ಎನ್. ಗಂಗಾನಾಯಕ್ ಸ್ವಾಗತಿಸಿದರು. ಪತ್ರಿಕೋದ್ಯಮ ಸಹಾಯಕ ಪ್ರಾಧ್ಯಾಪಕ ಸಿಬಂತಿ ಪದ್ಮನಾಭ ಕೆ ವಿ ನಿರೂಪಿಸಿ ವಂದಿಸಿದರು. ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ಸಂಯೋಜಕ ಸುದೀಪ್ ಕುಮಾರ್ ಆರ್. ಉಪಸ್ಥಿತರಿದ್ದರು.

**ಸಂಪಾದಕೀಯ ತಂಡ:** ಬೋಸಮ್ಮ ಓ., ಚಂದನ್ ಆರ್. ಕವನ ಕೆ.ವಿ., ಕಾವ್ಯ ಎನ್. ನಿಸರ್ಗ ಸಿ.ಎ., ಸವಿತ ಜಿ., ಷಣ್ಮುಖಾರಾಧ್ಯ ಬಿ.ಜಿ. **ಪುಟವಿನ್ಯಾಸ:** ಉಮೇಶ । ಇದು ಖಾಸಗಿ ಪ್ರಸಾರದ ಪ್ರಾಯೋಗಿಕ ಪತ್ರಿಕೆ
**ಅಧ್ಯಾಪಕ ಮಾರ್ಗದರ್ಶಕರು:** ಸಿಬಂತಿ ಪದ್ಮನಾಭ ಕೆ.ವಿ., ಅನನ್ಯ ಎಂ., ಪೃಥ್ವೀರಾಜ್ ಟಿ. **ಸುದ್ದಿ ಹಾಗೂ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳಿಸಿ:** journalismtut@gmail.com

ಸಂಪಾದಕೀಯ

## ಕರ್ನಾಟಕದಲ್ಲೂ ಆತಂಕ ಮೂಡಿಸಿದ ಕೊರೊನಾ ವೈರಸ್

ಚೀನಾದಲ್ಲಿ ಮೊದಲು ಪತ್ತೆಯಾಗಿದ್ದ ಕೊರೊನಾ ವೈರಸ್ ಈಗ ವಿಶ್ವದಾದ್ಯಂತ ಹರಡುತ್ತಿದೆ. ದುರದೃಷ್ಟವಶಾತ್ ಕರ್ನಾಟಕಕ್ಕೂ ಈ ಕೊರೊನಾ ವೈರಸ್ ಕಾಲಿಟ್ಟಿದೆ. ಈಗಾಗಲೇ ಬೆಂಗಳೂರಿನ ರಾಜೀವ್ ಗಾಂಧಿ ಆಸ್ಪತ್ರೆಯಲ್ಲಿ ಸೋಂಕಿನ ಲಕ್ಷಣಗಳನ್ನು ಹೊಂದಿರುವ ರೋಗಿಯೊಬ್ಬರು ದಾಖಲಾಗಿದ್ದಾರೆ. ರಾಜ್ಯದಲ್ಲಿಯೇ ಕಂಡುಬಂದ ಮೊದಲ ಪ್ರಕರಣವಾಗಿದ್ದು, ರೋಗಿಯ ರಕ್ತದ ಸ್ಯಾಂಪಲ್ ಅನ್ನು ಪುಣೆ ನ್ಯಾಷನಲ್ ವೈರಾಲಜಿ ಇನ್‌ಸ್ಟಿಟ್ಯೂಟ್‌ಗೆ ಕಳುಹಿಸಿದೆ.

ಚೀನಾದ ಯುವತಿಯೊಬ್ಬಳು ಬಾವಲಿ ಸೂಪ್ ಕುಡಿದದ್ದರಿಂದ ಮಾರಣಾಂತಿಕ ರೋಗ ಹರಡಲು ಕಾರಣ ಎಂದು ಚೀನೀಯರು ಹೇಳುತ್ತಿದ್ದಾರೆ. ಕೇರಳ ಮೂಲದ ನರ್ಸ್ ಒಬ್ಬರಲ್ಲಿ ಈ ವೈರಸ್ ಕಾಣಿಸಿಕೊಂಡಿದೆ. ಆದ್ದರಿಂದಲೇ ಕರ್ನಾಟಕಲ್ಲಿ ವೈರಸ್ ಕಾಣಿಸಿಕೊಳ್ಳದಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಕೊರೊನಾ ವೈರಸ್ ಚೀನಾದ ಲ್ಯಾಬ್‌ನಿಂದಲೇ ಸೋರಿಕೆ ಆಗಿರಬಹುದು ಎಂಬ ಶಂಕೆಯೂ ವ್ಯಕ್ತವಾಗಿದೆ. ಚೀನಾದ ವುಹಾನ್ ಪ್ರಾಂತ್ಯದಲ್ಲಿರುವ ಬಯೊಸೇಫ್ಟಿ ಲ್ಯಾಬ್‌ನಿಂದ ಹರಡಿರುವ ಸಾಧ್ಯತೆ ಇದೆ ಎನ್ನಲಾಗಿದೆ.

ಈ ವೈರಸ್ ದೇಹಕ್ಕೆ ಸೇರಿದರೆ ನ್ಯೂಮೋನಿಯ ಮತ್ತಿತರ ಉಸಿರಾಟದ ತೊಂದರೆಗಳು ಉಂಟಾಗಿ ತಲೆನೋವು ಕಾಣಿಸಿಕೊಂಡು ನಂತರ ಇಡೀ ದೇಹವನ್ನೇ ಆವರಿಸಿಕೊಳ್ಳುತ್ತದೆ. ಚೀನಾಗೆ ಹೋಗಿದ್ದ ಮೂವರು ಬೆಂಗಳೂರಿಗರು ಹಾಗೂ ಚೀನಾದಿಂದ ಬೆಂಗಳೂರಿಗೆ ಬಿಸಿನೆಸ್ ಉದ್ದೇಶದಿಂದ ಬಂದ ನಾಲ್ಕು ಜನರನ್ನು ಮೆಡಿಕಲ್ ಅಬ್ಸರ್ವೇಷನ್‌ನಲ್ಲಿ ಇಡಲಾಗಿದೆ. ಏಳು ಮಂದಿಯಲ್ಲಿ ಒಬ್ಬರಲ್ಲಿ ಕೊರೊನಾ ವೈರಸ್‌ನ ಗುಣಲಕ್ಷಣಗಳು ಹೆಚ್ಚಾಗಿರುವುದರಿಂದ ರಾಜೀವ್ ಗಾಂಧಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಕೊರೊನಾ ವೈರಸ್ ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಸಾಂಕ್ರಾಮಿಕ ರೋಗವಾಗಿದೆ ಎಂದು ತಜ್ಞರಿಂದ ದೃಢಪಟ್ಟಿದೆ. ಕೆಮ್ಮು, ಸೀನು ಹಾಗೂ ಶೇಕ್ ಹ್ಯಾಂಡ್ ಮಾಡುವುದರಿಂದಲೂ ಈ ಸೋಂಕು ಹರಡುತ್ತದೆ. ಥೈಲ್ಯಾಂಡ್, ಜಪಾನ್, ದಕ್ಷಿಣ ಕೊರಿಯಾದಲ್ಲೂ ಕೊರೊನಾ ವೈರಸ್ ಪ್ರಕರಣಗಳು ದಾಖಲಾಗಿವೆ. ಇತ್ತೀಚೆಗೆ ವುಹಾನ್‌ನಿಂದ ಬಂದ ವ್ಯಕ್ತಿಯೊಬ್ಬರಲ್ಲಿ ಈ ಸೋಂಕು ಕಾಣಿಸಿಕೊಂಡಿದ್ದು ಆಸ್ಟ್ರೇಲಿಯಾ ಬ್ರಿಸ್ಬೇನ್‌ನಲ್ಲಿ ಈ ಸೋಂಕು ಹೆಚ್ಚು ಹರಡಿರುವುದರಿಂದ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ.

ಚೀನಾದ ಆಡಳಿತ ಸಂಸ್ಥೆಗಳ ಪ್ರಕಾರ ಜ.21 ರಂದು 217 ಪ್ರಕರಣಗಳು ವರದಿಯಾಗಿದೆ. ಆದರೆ ಈ ಹಿಂದೆ ಈ ಸೋಂಕಿನಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ದುಪ್ಪಟ್ಟಿತ್ತು ಎನ್ನಲಾಗಿದೆ. ಒಟ್ಟಾರೆ 1,394 ಜನರು ವೈದ್ಯಕೀಯ ನಿಗಾ ಘಟಕದಲ್ಲಿದ್ದು, 765 ಮಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಚೀನಾದಲ್ಲಿ ಪತ್ತೆಯಾದ ನಿಗೂಢ ಕೊರೊನಾ ವೈರಸ್ ಬಲಿಯಾಗುತ್ತಿರುವ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ಈ ವೈರಸ್ ಈವರೆಗೆ ಸುಮಾರು 25 ಮಂದಿ ಸಾವನ್ನಪ್ಪಿದ್ದಾರೆ.

ಕೊರೊನಾ ವೈರಸ್ ಅನ್ನು ಸಂಪೂರ್ಣವಾಗಿ ನಾಶ ಮಾಡಲು ಸಾಧ್ಯವಿಲ್ಲ. ಎಲ್ಲಿಯೂ ಚಿಕಿತ್ಸೆ ದೊರೆತಿಲ್ಲ. ಆದರೆ ಮಿಡಲ್ ಈಸ್ಟ್ ರೆಸ್ಪಿರೇಟರಿ ಸಿಂಡ್ರೋಮ್ ಚಿಕಿತ್ಸೆ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಸೋಂಕು ಹರಡದಂತೆ ಮುನ್ನೆಚ್ಚರಿಕೆ ವಹಿಸಬೇಕಾಗಿದೆ.

# ವಿದ್ಯಾರ್ಥಿಗಳ ಕೈಯಲ್ಲಿ ಅರಳಿದ ಜ್ಞಾನ ವೃಕ್ಷ




ತುಮಕೂರು ವಿವಿ ಕಲಾ ಕಾಲೇಜಿನ ಆವರಣದಲ್ಲಿ ಅಂತಾರಾಷ್ಟ್ರೀಯ ಶಿಕ್ಷಣ ದಿನಾಚರಣೆ ಪ್ರಯುಕ್ತ ಲಲಿತಕಲಾ ವಿಭಾಗದ ವಿದ್ಯಾರ್ಥಿಗಳು ಜ್ಞಾನ ವೃಕ್ಷವನ್ನು ನಿರ್ಮಿಸಿದ್ದರು.

ಸಾವಿರಾರು ಹಸಿರು ಬಳೆಗಳ ನಡುವಿನಿಂದ ಅಲ್ಲೊಂದು ಜ್ಞಾನ ವೃಕ್ಷವೇ ಚಿಗುರಿತ್ತು. ಶಿಕ್ಷಣ, ಮಾನವ ಹಕ್ಕು, ಸಾರ್ವಜನಿಕ ಒಳಿತು, ಉತ್ತರದಾಯಿತ್ವ – ಆ ವೃಕ್ಷದ ಕುರಿತು ಒಂದೊಂದು ಕೊಂಬೆಗಳು ಒಂದೊಂದು ಕತೆಯನ್ನು ಹೇಳುತ್ತಿದ್ದವು.

ಅಂತಾರಾಷ್ಟ್ರೀಯ ಶಿಕ್ಷಣ ದಿನಾಚರಣೆಯ ಪ್ರಯುಕ್ತ ತುಮಕೂರು ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿಗಳು ಜ್ಞಾನ ವೃಕ್ಷವನ್ನು ನಿರ್ಮಿಸಿದ್ದರು. ಲಲಿತ ಕಲಾ ವಿಭಾಗದ ಕುಮಾರಸ್ವಾಮಿ ಎಚ್, ರಾಜೇಶ್ ಕೆ, ಚಂದ್ರಶೇಖರ್ ಎನ್ ಮತ್ತು ದೀಪಾ ಎ.ಎಸ್ ರೂಪಿಸಿದ ಕಲಾಕೃತಿ ಇದಾಗಿದ್ದು, ಇದನ್ನು ಜನವರಿ 24ರಂದು ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ವೈ.ಎಸ್ ಸಿದ್ದೇಗೌಡ ಲೋಕಾರ್ಪಣೆ ಮಾಡಿದರು.

ಈ ಜ್ಞಾನವೃಕ್ಷವನ್ನು ಶಿಕ್ಷಣ ದಿನಾಚರಣೆಯ ಸಂದರ್ಭದಲ್ಲಿ ವಿಶೇಷವಾಗಿ ಬಳೆಗಳನ್ನು ಬಳಸಿಕೊಂಡು ನಿರ್ಮಿಸಲಾಗಿದೆ. ವೃಕ್ಷದಲ್ಲಿ ಮೂಡಿದ ಪುಸ್ತಕದಲ್ಲಿ ಸ್ತ್ರೀ ಮತ್ತು ಪುರುಷರಿಗೆ ಸಮಾನ ಹಕ್ಕು ಎಂದು ವಿವರಿಸಲಾಗಿದೆ. ಜ್ಞಾನವೃಕ್ಷವು ಹತ್ತು ಬಣ್ಣಗಳ ಬಳೆಗಳಿಂದ ಕೂಡಿದ್ದಾಗಿದ್ದು ಸತತ ಎರಡು ದಿನಗಳ ಪರಿಶ್ರಮದ ಫಲವಾಗಿದೆ.

ಪ್ರತಿಯೊಂದು ಮರವು ಹೇಗೆ ಎಲೆ, ಹೂ, ಹಣ್ಣು ಕೊಡುವ ಮೂಲಕ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುತ್ತದೆಯೋ ಹಾಗೇ ಪ್ರತಿಯೊಬ್ಬರೂ ಶಿಕ್ಷಣ ಪಡೆದು ಜೀವನದಲ್ಲಿ ಸಾರ್ಥಕತೆ ಹೊಂದಬೇಕು ಎಂಬುದು ಈ ಕಲಾ ಕೃತಿಯ ತಾತ್ಪರ್ಯವಾಗಿದೆ.

ಜ್ಞಾನ ಎಂದರೆ ತಿಳುವಳಿಕೆ, ಸಂವೇದನೆಯ ಪ್ರಭಾವಗಳನ್ನು ಸ್ವೀಕರಿಸುವ, ಅವುಗಳನ್ನು ಉಳಿಸಿಕೊಳ್ಳುವ ಮತ್ತು ಸೂಕ್ತ ಸಮಯದಲ್ಲಿ ಜ್ಞಾಪಿಸಿಕೊಳ್ಳುವ ಶಕ್ತಿ. ಇದು ಬುದ್ಧಿಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಅಗತ್ಯವಾದ ಕಲಿಕೆ ಮತ್ತು ಗ್ರಹಿಕಾಶಕ್ತಿಯ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರವಹಿಸುತ್ತದೆ.

ಜ್ಞಾನವೂ ಕೂಡ ಬಣ್ಣಗಳು ಧೈರ್ಯ, ತ್ಯಾಗ, ಶಾಂತಿ, ಸಮನತೆಯ ಪ್ರತೀಕವಾಗಿದೆ, ಇದು ತುಮಕೂರಿನ ಕಲಾಸಿರಿಯನ್ನು ಎತ್ತಿಹಿಡಿದು ಜನರ ಗಮನ ಸೆಳೆಯುವಂತಿತ್ತು.

ಈ ಸಂದರ್ಭ ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡರು ಮಾತನಾಡಿ, "ಜ್ಞಾನದಿಂದ ಜವಾಬ್ದಾರಿಯುತ ಪ್ರಜೆಯಾಗಿ ಕರ್ತವ್ಯ ನಿರ್ವಹಿಸಬೇಕು. ನಮ್ಮ ಜೀವನ ನಾವು ತಿಳಿದುಕೊಂಡಿರುವಷ್ಟು ಸುಲಭವಲ್ಲ. ಆಚರಣೆ ಮುಖ್ಯ. ಮಾತು ಮಿತಗೊಳಿಸಿ ಕೃತಿಯನ್ನು ಹೆಚ್ಚಿಸಬೇಕು. ನಮ್ಮ ಹಕ್ಕುಗಳಿಗಿಂತ ಮೊದಲು ಕರ್ತವ್ಯವನ್ನು ಮಾಡುವುದೇ ಶಿಕ್ಷಣ. ಕಾಲ ಕಾಲಕ್ಕೆ ಪರಿಸ್ಥಿತಿ ಪರಿಸರ ಬದಲಾಗುತ್ತಾ ಹೋಗುವುದು ಹಾಗೆಯೇ ಶಿಕ್ಷಣ ಮತ್ತು ಜ್ಞಾನ ಎಂಬುವುದು ಬದಲಾವಣೆಯಾಗಬೇಕು" ಎಂದಿರುವುದು ಮಾರ್ಮಿಕವಾಗಿದೆ.

ಜ್ಞಾನಕ್ಕೆ ಹಣ, ಮಾತು ಮುಖ್ಯವಲ್ಲ, ವ್ಯಕ್ತಿತ್ವ, ಕರ್ತವ್ಯ, ಜವಾಬ್ದಾರಿ ಮುಖ್ಯ. ಸರಿಯಾದ ಮಾರ್ಗ ಯಾರು ತೋರಿಸುತ್ತಾರೆ ಅವರೇ ಉತ್ತಮವಾದ ಜ್ಞಾನಿಗಳು. ಜ್ಞಾನ ಎಂದರೆ ಪುಸ್ತಕದ ಪ್ರಜ್ಞೆ ತಿಳಿಯುವುದು ಅಲ್ಲ ಲೋಕದ ಪ್ರಜ್ಞೆಯನ್ನು ತಿಳಿಯುವುದು. ನೀವು ನಿಮಗಾಗಿ ಬೆಳೆಯಬಾರದು. ಸಮಾಜದಲ್ಲಿ ಗುರುತಿಸಿಕೊಳ್ಳುವಂತಹ ಸ್ಥಾನವನ್ನು ಪಡೆದುಕೊಳ್ಳಬೇಕು.

ನಮ್ಮ ಅನುಭವಕ್ಕೆ ಬರುವ ಜ್ಞಾಪಕಶಕ್ತಿಯೆ ಮುಖ್ಯವಾಗಿ ಬಾಹ್ಯ ಸ್ವರೂಪದ್ದಾಗಿದ್ದು, ಅದನ್ನು ಸಂಪೂರ್ಣವಾಗಿ ಬಳಸುವುದು ಅತ್ಯಂತ ವಿರಳ. ಆಧುನಿಕ ಉಪಕರಣಗಳಾದ ಕಂಪ್ಯೂಟರ್ ಮತ್ತು ಕ್ಯಾಲ್ಕುಲೇಟರ್‌ಗಳಿಂದಾಗಿ ಮೆದುಳಿಗೆ ಸಾಕಷ್ಟು ವ್ಯಾಯಾಮ ಅಥವಾ ಕಸರತ್ತು ತಪ್ಪುತ್ತಿದ್ದು, ಇದರಿಂದ ಮಾಹಿತಿಯನ್ನು ಜ್ಞಾಪಕರೂಪದಲ್ಲಿ ಸಂಗ್ರಹಿಸುವ ನಮ್ಮ ಶಕ್ತಿಯನ್ನು ಪರೋಕ್ಷವಾಗಿ ಅಡಗಿದಂತಾಗುತ್ತಿದೆ.

ವಿಶ್ವವಿದ್ಯಾನಿಲಯ ಕಲಾ ಕಾಲೇಜು ಪ್ರಾಂಶುಪಾಲ ಕೆ. ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಉಪಪ್ರಾಂಶುಪಾಲ ಟಿ.ಎನ್. ಹರಿಪ್ರಸಾದ್, ಕನ್ನಡ ಹಾಗೂ ಲಲಿತ ಕಲಾ ವಿಭಾಗದ ಮುಖ್ಯಸ್ಥ ಬಿ. ಕರಿಯಣ್ಣ ಉಪಸ್ಥಿತರಿದ್ದರು. ಉಪನ್ಯಾಸಕರಾದ ಡಾ. ಸಿದ್ದಲಿಂಗಸ್ವಾಮಿ ಹಿರೇಮಠ, ಡಾ. ಸಂತೋಷ ನಾಗರಾಳ, ಅಮೀನ್ ರೆಡ್ಡಿ, ದಿಲೀಪ್ ಎಂ.ವಿ., ಸುಂದರೇಶ್ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಕಲಾಕೃತಿ ನಿರ್ಮಿಸಿದ್ದರು.

ಬೋಸಮ್ಮ ಓ.

# ವಿಶ್ವಮಾನವ ಸಂದೇಶದಲ್ಲಿ ಸಮಾಜದ ಭವಿಷ್ಯ: ಪ್ರೊ. ಚಿದಾನಂದ ಗೌಡ

**ತುಮಕೂರು:** ಕುವೆಂಪು ವಿಶ್ವ ಮಾನವ ಸಂದೇಶವನ್ನು ಲೋಕಕ್ಕೆ ಸಾರಿದರು. ಅದರಲ್ಲಿ ಸಮಾಜದ ಭವಿಷ್ಯ ಅಡಗಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಚಿದಾನಂದ ಗೌಡ ತಿಳಿಸಿದರು.



ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಿದ್ದ ಕುವೆಂಪು ಜನ್ಮದಿನಾಚರಣೆ ಹಾಗೂ ಕುವೆಂಪು ಓದು ಅಭಿಯಾನ ಕಾರ್ಯಕ್ರಮವನ್ನು ವಿಶ್ರಾಂತ ಕುಲಪತಿ ಪ್ರೊ. ಚಿದಾನಂದ ಗೌಡ ಉದ್ಘಾಟಿಸಿದರು.

ತುಮಕೂರು ವಿಶ್ವ ವಿದ್ಯಾನಿಲಯದ ಕುವೆಂಪು ಅಧ್ಯಯನ ಪೀಠ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ರಾಮ ಮನೋಹರ ಲೋಹಿಯಾ ಸಮತಾ ವಿದ್ಯಾಲಯದ ವತಿಯಿಂದ ತುಮಕೂರು ವಿವಿಯಲ್ಲಿ ಜ.3ರಂದು ಆಯೋಜಿಸಿದ್ದ ಕುವೆಂಪು ಜನ್ಮದಿನಾಚರಣೆ ಹಾಗೂ ಕುವೆಂಪು ಓದು ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವಮಾನವ ಸಂದೇಶದಲ್ಲಿ ಮನುಜ ಮತ, ವಿಶ್ವಪಥ, ಸರ್ವೋದಯ, ಸಮನ್ವಯತೆ, ಪೂರ್ಣದೃಷ್ಟಿಗಳ ಮಂತ್ರ ಇದೆ. ಅದನ್ನು ಆಧುನಿಕ ಸಮಾಜ ಮರೆಯಬಾರದು ಎಂದರು.

ಕುವೆಂಪು ಕನ್ನಡ ಸಾಹಿತ್ಯ ಕ್ಷೇತ್ರದ ಕಥೆ, ಕವನ, ಕಾದಂಬರಿ, ಲೇಖನ ಇತ್ಯಾದಿ 32 ವಿಭಾಗಗಳಲ್ಲಿ ಕೆಲಸ ಮಾಡಿದ್ದಾರೆ. ಅವರು ಕನ್ನಡ ಪ್ರೀತಿ, ಪ್ರಕೃತಿ, ಅಧ್ಯಾತ್ಮ, ವಿಜ್ಞಾನ ಹಾಗೂ ವಿಶ್ವ ಮಾನವ ಸಂದೇಶದ ವಿವಿಧ ಆಯಾಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂದರು.

ಕುವೆಂಪುರವರ ಪುತ್ರಿ ಹಾಗೂ 'ಮಗಳು ಕಂಡ ಕುವೆಂಪು' ಕೃತಿಯ ಲೇಖಕಿ ತಾರಿಣಿ ಚಿದಾನಂದ ಮಾತನಾಡಿ ಕುವೆಂಪು ಯಾವುದೇ ಕಾದಂಬರಿಯನ್ನು ಬರೆಯುವಾಗ ಮೊದಲು ಮ್ಯಾಪ್ ಅನ್ನು ತಯಾರಿಸಿಕೊಳ್ಳುತ್ತಿದ್ದರು ಎಂದು ಕುವೆಂಪು ಬರವಣಿಗೆಯ ಶೈಲಿಯನ್ನು ವಿವರಿಸಿದರು. ಹೀಗೆ ಕುವೆಂಪು ಕಾಲದ ಸಾಹಿತ್ಯ ಸೊರಗುತ್ತಿದ್ದ ಬಗೆ ಮತ್ತು ಅದರಲ್ಲಿಯೂ ಕುವೆಂಪುರವರ ಬೆಳವಣಿಗೆಯನ್ನು ಸವಿಸ್ತಾರವಾಗಿ ತಿಳಿಸಿದರು.

ತುಮಕೂರು ವಿವಿಯ ಕುಲಪತಿ ಪ್ರೊ ವೈ ಎಸ್ ಸಿದ್ದೇಗೌಡ ಮಾತನಾಡಿ ಕುವೆಂಪುರವರ ವೈಚಾರಿಕ ಚಿಂತನೆಯನ್ನು ಎಲ್ಲರೂ ಓದುತ್ತಾರೆ. ಆದರೆ ಅವುಗಳ ಆಚರಣೆಗೆ ತರುವ ಬದ್ಧತೆಯ ಕೊರತೆ ನಮ್ಮಲ್ಲಿದೆ. ವಿದ್ಯಾರ್ಥಿಗಳಲ್ಲಿನ ಹೃದಯ ಶ್ರೀಮಂತಿಕೆಯನ್ನು ಆತ್ಮಶ್ರೀ ಲೇಖನ ಹೆಚ್ಚಿಸಿದೆ ಎಂದರು.

ಕುವೆಂಪು ಓದಿನಿಂದ ನಮ್ಮ ಭಾವನೆಗಳು ಸದ್ಭಾವನೆಗಳೆಡೆಗೆ ಹೊರಳುತ್ತವೆ. ಕಾರಣ ಕುವೆಂಪುರವರ ವೈಚಾರಿಕ ಚಿಂತನೆಯೇ ಆಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕುಲಸಚಿವರಾದ ಪ್ರೊ ಕೆ ಎನ್ ಗಂಗಾನಾಯಕ್, ಜಿಲ್ಲಾ ಕಸಾಪ ಅಧ್ಯಕ್ಷರಾದ ಬಾ ಹ ರಮಾಕುಮಾರಿ, ಕುವೆಂಪು ಅಧ್ಯಯನ ಪೀಠದ ನಿರ್ದೇಶಕಿ ಡಾ. ಗೀತಾ ವಸಂತ, ರಾಮ ಮನೋಹರ ಲೋಹಿಯಾ ಸಮತಾ ವಿದ್ಯಾಲಯದ ಮಲ್ಲಿಕಾ ಬಸವರಾಜು ಉಪಸ್ಥಿತರಿದ್ದರು.

# ಕನ್ನಡ ವಿಕಿಪೀಡಿಯಕ್ಕೆ ಸಕ್ರಿಯ ಸಂಪಾದಕರ ಅವಶ್ಯಕತೆ ಇದೆ: ಡಾ. ಯು.ಬಿ. ಪವನಜ

**ತುಮಕೂರು:** ಕನ್ನಡ ವಿಕಿಪೀಡಿಯವನ್ನು ಬಲಪಡಿಸುವುದಕ್ಕಾಗಿ ಇನ್ನಷ್ಟು ಸಕ್ರಿಯ ಸಂಪಾದಕರ ಅವಶ್ಯಕತೆ ಇದೆ ಎಂದು ಅಂಕಣಕಾರ, ಕರಾವಳಿ ವಿಕಿಮೀಡಿಯನ್ಸ್ ಕಾರ್ಯದರ್ಶಿ ಡಾ. ಯು.ಬಿ. ಪವನಜ ತಿಳಿಸಿದರು.



ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಿದ್ದ ಎರಡು ದಿನಗಳ ಕನ್ನಡ ವಿಕಿಪೀಡಿಯ ಸಂಪಾದನೋತ್ಸವದಲ್ಲಿ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಭಾಗವಹಿಸಿದ್ದರು.

ತುಮಕೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಕರಾವಳಿ ವಿಕಿಮೀಡಿಯನ್ಸ್ ಹಾಗೂ ವಿಕಿವಿಮೆನ್ ಮಂಗಳೂರು ಜಂಟಿಯಾಗಿ ಏರ್ಪಡಿಸಿದ್ದ ಎರಡು ದಿನಗಳ ಎರಡನೆಯ ಹಂತದ ಕನ್ನಡ ವಿಕಿಪೀಡಿಯ ಸಂಪಾದನೋತ್ಸವದಲ್ಲಿ ಮಾತನಾಡಿದರು.

ಜಗತ್ತಿನ 304 ಭಾಷೆಗಳಲ್ಲಿ, ಭಾರತದ 20ಕ್ಕೂ ಹೆಚ್ಚು ಭಾಷೆಗಳಲ್ಲಿ ವಿಕಿಪೀಡಿಯ ಸ್ವತಂತ್ರ ವಿಶ್ವಕೋಶ ಕಾರ್ಯನಿರ್ವಹಿಸುತ್ತಿದೆ. ಭಾರತದಲ್ಲಿ ಸಕ್ರಿಯರಾಗಿರುವವರು 800 ಸಂಪಾದಕರು ಮಾತ್ರ. ಕನ್ನಡ ವಿಕಿಪೀಡಿಯ ಸಂಪಾದನೆಯಲ್ಲಿ ಸುಮಾರು 3350 ಮಂದಿ ತೊಡಗಿದ್ದರೂ ಸಕ್ರಿಯರಾಗಿರುವವರು 315 ಮಾತ್ರ. ಈ ಸಂಖ್ಯೆಯನ್ನು ಹೆಚ್ಚಿಸುವ ಅವಶ್ಯಕತೆ ಇದೆ ಎಂದರು.

ಕನ್ನಡ ವಿಕಿಪೀಡಿಯದಲ್ಲಿ 25 ಸಾವಿರಕ್ಕೂ ಹೆಚ್ಚು ಲೇಖನಗಳಿವೆ. ವಿದ್ಯಾರ್ಥಿಗಳಿಂದ ತೊಡಗಿ ಎಲ್ಲ ಸಾರ್ವಜನಿಕರಿಗೆ ಕನ್ನಡದಲ್ಲಿ ಮಾಹಿತಿ ಬಯಸುವವರಿಗೆ ಇವು ಅತ್ಯುಪಯುಕ್ತ ಎನಿಸಿವೆ. ಕನ್ನಡ ವಿಕಿಪೀಡಿಯಕ್ಕೆ ಪ್ರತೀ ತಿಂಗಳೂ 47 ಲಕ್ಷಕ್ಕೂ ಹೆಚ್ಚು ಪುಟವೀಕ್ಷಣೆಗಳಿವೆ. ಈ ಅಂಕಿಅಂಶಗಳು ಇನ್ನಷ್ಟು ಸಕ್ರಿಯ ಸಂಪಾದಕರ ಅವಶ್ಯಕತೆಯನ್ನು ಎತ್ತಿತೋರಿಸುತ್ತವೆ ಎಂದರು.

ವಿಕಿಪೀಡಿಯವನ್ನು ಯಾರು ಬೇಕಾದರೂ ಸಂಪಾದಿಸಬಹುದು. ಅದು ಜನರಿಂದ ಜನರಿಗಾಗಿ ಜನರೇ ನಡೆಸುವ ವಿಶ್ವಕೋಶ. ಆದರೆ ನೀತಿನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಅವಶ್ಯಕ. ವಿಷಯ ನಿರೂಪಣೆ ವಸ್ತುನಿಷ್ಠವೂ ವ್ಯವಸ್ಥಿತವೂ ಆಗಿರಬೇಕು. ಹೊಗಳಿಕೆ, ತೆಗಳಿಕೆ, ವೈಯಕ್ತಿಕ ನಿಂದೆ, ಅನಗತ್ಯ ವಿಶೇಷಣಗಳು ಇರಬಾರದು ಎಂದರು.

ಮುದ್ರಿತ ವಿಶ್ವಕೋಶಗಳ ಇತಿಮಿತಿಗಳಿಗೆ ಅಂತರಜಾಲಾಧಾರಿತ ವಿಶ್ವಕೋಶಗಳು ಉತ್ತಮ ಪರಿಹಾರ. ಮುದ್ರಿತ ವಿಶ್ವಕೋಶಗಳು ಹೊಸ ಮಾಹಿತಿ ಸೇರಿಸಿಕೊಂಡು ಮರುಮುದ್ರಣವಾಗುವುದಕ್ಕೆ ಅನೇಕ ವರ್ಷ ತೆಗೆದುಕೊಳ್ಳುತ್ತವೆ. ಆನ್‌ಲೈನ್ ವಿಶ್ವಕೋಶಗಳನ್ನು ಆಗಿಂದಾಗ್ಗೆ ಹೊಸ ಮಾಹಿತಿಗಳಿಂದ ವಿಸ್ತಾರಗೊಳಿಸಬಹುದು. ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನುವಾದಿಸುವಾಗ ಎಚ್ಚರಿಕೆ ಬೇಕು. ಭಾಷೆಯಲ್ಲಿ ಏಕರೂಪತೆ ಮತ್ತು ಶಿಷ್ಟತೆ ಇರಬೇಕು. ಅಧಿಕೃತ ಹಾಗೂ ಗಂಭೀರ ಮಾಹಿತಿಗಳನ್ನಷ್ಟೇ ಬಳಸಬೇಕು ಎಂದರು.

ಕಾರ್ಯಾಗಾರದಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಭಾರತೀಯ ಮಹಿಳಾ ಕ್ರೀಡಾಪಟುಗಳ ಕುರಿತ ಹೊಸ ಲೇಖನಗಳನ್ನು ಕನ್ನಡ ವಿಕಿಪೀಡಿಯಕ್ಕೆ ಸೇರಿಸಿದರು. ಸಂಪನ್ಮೂಲ ವ್ಯಕ್ತಿ ಧನಲಕ್ಷ್ಮೀ ಕೆ. ಟಿ., ಕಾರ್ಯಾಗಾರದ ಸಂಚಾಲಕ ಸಿಬಂತಿ ಪದ್ಮನಾಭ ಕೆ.ವಿ., ಉಪನ್ಯಾಸಕರಾದ ಕೋಕಿಲ ಎಂ.ಎಸ್., ಪೃಥ್ವೀರಾಜ ಟಿ., ಅನನ್ಯ ಎಂ., ದೇವರಾಜು ಸಿ. ಹಾಗೂ ಮಾರುತೇಶ್ ಪಿ.ಎಲ್. ಉಪಸ್ಥಿತರಿದ್ದರು.

